## ಇಲ್ಲಿಯವರೆಗೆ...

ದಿಂಗ್ಸೆ ಎನ್ನುವ ಭಿಕ್ಕುವಿನಿಂದ ನಿರೂಪಕನ ತಂಡಕ್ಕೆ ಅನೇಕ ಸಂಗತಿಗಳು ತಿಳಿಯುತ್ತವೆ. ಒಂದು ಪತ್ರದಲ್ಲಿ ಎಲ್ಲಾ ಪ್ರಶ್ನೆಗಳಿಗೆ ಉತ್ತರ ದೊರಕುತ್ತವೆ. ಯೆಹೂದಿಗಳನ್ನು ಪ್ರಾಣಿಗಳಂತೆ ಪ್ರಯೋಗಾಲಯಕ್ಕೆ ಒಡ್ಡಿದ ಬ್ರುನೋ ಬೆಗರ್, ಆಗಸ್ಟ್ ಹಿರ್ಟ್ ಅವರ ಕೃತ್ಯಗಳು, ಆರ್ಯವೀರ್ಯದ ಬೀಜಗಳನ್ನು ಬಿತ್ತಿ ಬೆಳೆಸಲು ನಡೆಸಲಾದ ರಹಸ್ಯ ಕಾರ್ಯಾಚರಣೆ, ಜರ್ಮನ್ನರ ಷಡ್ಯಂತ್ರಕ್ಕೆ ಬಲಿಯಾದ ಟಿಬೆಟ್ಟಿನ ಹೆಣ್ಣುಮಕ್ಕಳ ದಾರುಣ ಸ್ಥಿತಿಗತಿಗಳು ಕೂಡ ಬಯಲಾಗುತ್ತವೆ...

ನನ್ನ ಆಶಯ ನೆರವೇರಿದೆ ಎಂದುಕೊಳ್ಳುತ್ತೇನೆ. ಇಷ್ಟೆಲ್ಲ ಪೀಠಿಕೆಗೆ ಕಾರಣ ನಿನ್ನ ಅಜ್ಜಿಯಾಗಿ ಮುಖತಃ ಹೇಳಲಾಗದ ವಿವರಗಳನ್ನು ಇಲ್ಲಿ ತೆರೆದಿಡುತ್ತಿರುವುದು. ಆ ವಿವರಗಳನ್ನು ಓದಿ ನನ್ನ ಮೇಲೆ ಅಸಹ್ಯ ಪಡುವೆಯೇನೋ ಎಂಬ ಆತಂಕದಿಂದ.

ನಮ್ಮ ಹಿನ್ನೆಲೆ, ನಮ್ಮ ಚರಿತ್ರೆ, ನಮ್ಮ ವಂಶ, ನಮ್ಮ ಊರು, ನಮ್ಮನ್ನು ಹೆತ್ತು ಹೊತ್ತವರು... ಈ ವಿವರಗಳು ತಿಳಿಯದಿದ್ದಲ್ಲಿ ನಾವು ಅತಂತ್ರತೆಯ ಭೀತಿಯಲ್ಲಿ ಬದುಕುತ್ತೇವೆ. ನಿನ್ನದು ಅಂತಹ ಬದುಕಾಗಿತ್ತು ಎಂದು ನನಗೆ ಗೊತ್ತು. ಕಾರಣ ನಿನ್ನ ತಂದೆ ತಾಯಿ ತಮ್ಮ ಹಿನ್ನೆಲೆಯನ್ನು ಹೇಳುವ ಮುನ್ನವೆ ನಿನ್ನಿಂದ ದೂರವಾದರು. ನೂರಾರು ಕೋಟಿ ಜನರ ಈ ಪ್ರಪಂಚದಲ್ಲಿ ನನ್ನವರು ಎಂದು ಒಬ್ಬರೂ ಇಲ್ಲ ಎಂಬ ಸ್ಥಿತಿಯಲ್ಲಿದ್ದಾಗ ಸದಾ ಕಾಡುವ ಏಕಾಂತದ ಹಿಂಸೆಯನ್ನೂ ನೀನು ಅನುಭವಿಸಿದ್ದೀಯ. ಇದೆಲ್ಲಕ್ಕೂ ಕಾರಣ ನಾನೆ. ಅದಕ್ಕಾಗಿ ಮೊದಲು ನಿನ್ನ ಕ್ಷಮೆ ಕೋರುತ್ತೇನೆ. ಆದರೆ ಇದಕ್ಕೆಲ್ಲ ಮೂಲ ಕಾರಣ ಪ್ರಪಂಚದ ಹಲವು ಐತಿಹಾಸಿಕ ವ್ಯಕ್ತಿಗಳ ವಿಕೃತ ವಾಂಛೆಗಳು ಎಂದರೆ ನೀನು ನಂಬಲಾರೆ.

ಇದೆಲ್ಲವೂ ಪ್ರಾರಂಭವಾದದ್ದು 1938ರಲ್ಲಿ. ಎರಡನೇ ಮಹಾಯುದ್ಧ ಪ್ರಾರಂಭವಾಗುವ ಮುನ್ನ. ಆಗ ನನಗೆ ಸುಮಾರು ಹದಿನೆಂಟು ವರ್ಷ. ಟಿಬೆಟ್ಟಿನ ಸಾಮಾನ್ಯ ಹೆಣ್ಣುಮಗಳಾಗಿ ಸಂತೋಷವಾಗಿ ಬದುಕಿದ್ದೆ. ಆದರೆ ನನ್ನ ಹಳ್ಳಿಯಲ್ಲಿ ನಡೆದ ಘಟನೆಯೊಂದು ನನ್ನನ್ನು ಎಲ್ಲೆಲ್ಲಿಗೋ ಕರೆದೊಯ್ಯಿತು. ದಾರ ಕಳಚಿಕೊಂಡ ಗಾಳಿಪಟದಂತೆ ದಿಕ್ಕು ದೆಸೆಯಿಲ್ಲದ ಅಲೆಮಾರಿಯಾದೆ. ಇದಕ್ಕೆ ಕಾರಣ ಜರ್ಮನ್ನರ ಉದ್ಧಟತನ!

ಜರ್ಮನಿಯ ಸ್ಕಾಫರ್ ಎಂಬ ಪಕ್ಷಿತಜ್ಞ, ಟಿಬೆಟ್ಟಿನ ಜೀವ ಸಂಪದ, ಭೂಸಂಪದ, ಪರಿಸರ, ಮತ್ತು ಮಾನವ ಪಂಗಡಗಳನ್ನು ಅಧ್ಯಯನ ಮಾಡಲೆಂದು ಒಂದು ಯೋಜನೆಯನ್ನು ತಯಾರಿಸಿ, ಅನುದಾನಕ್ಕೆಂದು ಹಿಟ್ಲರ್‌ನ ಬಲಗೈ ಎಂದೆ ಕರೆಯಲಾಗುವ ಹಿಮ್ಲರ್‌ಗೆ ಸಲ್ಲಿಸುತ್ತಾನೆ. ಈ ಸ್ಕಾಫರ್ ಈಗಾಗಲೆ ಎರಡು ಬಾರಿ ಟಿಬೆಟ್ಟಿಗೆ ಬೇಟಿ ನೀಡಿರುತ್ತಾನೆ. ಹಾಗಾಗಿ ಆತನ ಅಧ್ಯಯನಶೀಲತೆಯ ಬಗ್ಗೆ ಎಲ್ಲರಿಗೂ ದೃಢ ನಂಬಿಕೆ ಇರುತ್ತದೆ. ಹಾಗೆಂದೆ ಹಿಮ್ಲರ್ ಈ ಯೋಜನೆಗೆ ಒಪ್ಪಿಗೆ ನೀಡುತ್ತಾನೆ. ಆದರೆ ಹಿಮ್ಲರ್ ಈ ಯೋಜನೆಯ